ನೋಡಿದ ತಕ್ಷಣ ಯಾರನ್ನಾದರೂ ಪ್ರಭಾವಿಸಬಲ್ಲ ನಿಲುವು. ಒಂದು ವೇಳೆ ಲೇಖಕನಾಗದಿದ್ದರೆ ದೊಡ್ಡ ಆಫೀಸರೋ, ಮಂತ್ರಿಯೋ ಆಗಬಹುದಾಗಿದ್ದಂಥ ಗತ್ತು!

ಎದುರಿಗೆ ನಿಂತ ಎಳಸು ಹುಡುಗ ತಮಗೆ ಯಾವ ರೀತಿಯಲ್ಲೂ ಸವಾಲಾಗಲಾರ ಎಂದು ಖಾತ್ರಿಯಾದವರಂತೆ ದೇಸಾಯಿ ಯುದ್ಧ ಶುರುವಾಗುವ ಮೊದಲೇ ಗೆಲುವಿನ ನಗೆ ನಗುತ್ತಾ, 'ಕಮ್' ಎಂದು ಆತ್ಮವಿಶ್ವಾಸದಿಂದ ಒಳ ನಡೆದರು. ತ್ರಿಭುವನ ಮಹಿಪಾಲರ ದೊಡ್ಡ ಹಜಾರದಲ್ಲಿ ಈ ಕಾಲದ ಸೋಫಾಗಳು ಅಸಂಬದ್ಧವಾಗಿ ಕುಂತಿದ್ದವು. ಅಲ್ಲೇ ಟೀಪಾಯಿಯ ಮೇಲೆ 'ಕನ್ನಡವಾಣಿ' ಪತ್ರಿಕೆಯ ಅವತ್ತಿನ ಸಂಚಿಕೆ ಕಂಡು ಹುಲಗಪ್ಪ ಹುಬ್ಬೇರಿಸಿದ. ತನ್ನ ಲೇಖನದ ಮುಂದಿನ ಭಾಗ ಮುಂದೊಮ್ಮೆ ಪತ್ರಿಕೆಯಲ್ಲಿ ಬರುವ ಅಂದಾಜಿದ್ದರೂ ಅದು ಅವತ್ತೇ ಬರುವುದು ಗೊತ್ತಿರಲಿಲ್ಲ. ದೇಸಾಯರು ಕಿರುಗಣ್ಣಿನ ಮಿಂಚಲ್ಲೇ ಆ ಪತ್ರಿಕೆಯನ್ನು ಸೂಚಿಸುತ್ತಾ, 'ಇನ್ನೂ ಎಷ್ಟು ಕಂತು ಬರುತ್ತೆ?' ಅಂದರು. ದನಿಯಲ್ಲಿ ವಿಚಾರಣೆಯ ಸಣ್ಣ ಎಳೆಯಿತ್ತು. 'ಸದ್ಯಕ್ಕೆ ಇಷ್ಟೇ ಸಾರ್' ಅಂದ ಹುಲಗಪ್ಪ ತನ್ನ ಲೇಖನವನ್ನು ಅಚ್ಚಿನಲ್ಲಿ ನೋಡುವ ಕಾತರದಿಂದ ಇನ್ನೇನು ಪೇಪರನ್ನು ಕೈಗೆತ್ತಿಕೊಳ್ಳುವಷ್ಟರಲ್ಲಿ ಅದಾಗಲೇ ದೇಸಾಯರ ಕೈಯಲ್ಲಿತ್ತು. ನೋಡನೋಡುತ್ತಿದ್ದಂತೆ ದೇಸಾಯಿ ಆ ನಾಲ್ಕು ಪುಟದ ಪೇಪರಿನಲ್ಲಿ ಮುಳುಗಿಬಿಟ್ಟರು. ನಡುವೆ ಒಮ್ಮೆ ಕತ್ತೆತ್ತಿ ತೀಕ್ಷ್ಣವಾಗಿ ಹುಲಗಪ್ಪನನ್ನೇ ನೋಡಲೆತ್ನಿಸಿ ಮತ್ತೆ ಲೇಖನದತ್ತ ಕಣ್ಣಾಡಿಸತೊಡಗಿದರು. ವಿಚಿತ್ರವಾದ ಮಾರ್ದವ ಭಾವ ಅವರ ಮುಖದ ಮೇಲೆ ಮೂಡತೊಡಗಿತು.

ತಡವರಿಸುತ್ತಲೇ ಬರೆಯುವ ಈ ಹುಡುಗನ ಶಕ್ತಿ ದೇಸಾಯರಲ್ಲಿ ವಿಸ್ಮಯ ಹುಟ್ಟಿಸಿತ್ತು. ಹತ್ತಾರು ವರ್ಷ ಇತಿಹಾಸ ಬರವಣಿಗೆ ಮಾಡಿದ ಲೇಖಕರಲ್ಲಿ, ಕಾದಂಬರಿಕಾರರಲ್ಲಿ ಕೂಡ ಈ ಬಗೆಯ ಏರಿಳಿತಗಳಿಲ್ಲದ ಭಾಷೆ ಕಂಡದ್ದು ದೇಸಾಯರಿಗೆ ನೆನಪಿರಲಿಲ್ಲ. ಎಲ್ಲೋ ರೊಮಿಲಾ ಥಾಪರ್ ಥರದ ದೊಡ್ಡ ಚರಿತ್ರಕಾರ್ತಿಯ ಬರವಣಿಗೆಯಲ್ಲಿ ಕಾಣುವಂಥ ಸಂಯಮ ಇದು. ಅತಿ ಅಲಂಕಾರವಿಲ್ಲದ ಭಾಷೆ. ಎಷ್ಟು ಬೇಕೋ ಅಷ್ಟು ಮಾತ್ರ ವಿವರ. ಈ ಹುಡುಗ ತ್ರಿಭುವನ ಮಹಿಪಾಲರ ಜಾತಿಯವನಾಗಿದ್ದರೆ ಅವನ ರಕ್ತದಲ್ಲೇ ಆ ವಿವರ, ಸತ್ಯ ಹರಿದು ಬಂದಿರಬಹುದೇ? ಛೇ! ರಕ್ತದಲ್ಲಿ ಇದೆಲ್ಲ ಹೇಗೆ ಹರಿದು ಬರಲು ಸಾಧ್ಯ! ಆದರೂ ಸಂಸ್ಕೃತದ ಭಾರವಿಲ್ಲದ, ಐತಿಹಾಸಿಕ ಕಾದಂಬರಿಗಳ ಅಥವಾ ಹಿಸ್ಟರಿ ಪಠ್ಯ ಪುಸ್ತಕಗಳ ಪದಜಾಲಗಳಿಲ್ಲದ ಶೈಲಿ. ಹಳ್ಳಿಗನ್ನಡದ ಸ್ಪರ್ಶವಿರುವ ಈ ಬರವಣಿಗೆ ತಮ್ಮ ಆವರೆಗಿನ ಐತಿಹಾಸಿಕ ಕಾದಂಬರಿ ಬರವಣಿಗೆಯ ಮಾರ್ಗವನ್ನೇ ಅಣಕಿಸುತ್ತಿರುವಂತೆ ದೇಸಾಯರನ್ನು ಕೆಣಕಿತು. ಅ.ನ.ಕೃಷ್ಣರಾಯರ ಕಾಲದಿಂದ ರೂಢಿಸಿಕೊಂಡ ತನ್ನ ಕ್ಷಿಪ್ರ ಮೋಹಕ ಶೈಲಿಯನ್ನು- ಒಂದು ಕಾಲಕ್ಕೆ ಜನಮೆಚ್ಚುಗೆ ಗಳಿಸಿದ್ದ ತಮ್ಮ ಉಜ್ವಲ ಶೈಲಿಯನ್ನು- ನವ್ಯ ವಿಮರ್ಶಕರಾದ ಲಂಕೇಶ್, ಅನಂತಮೂರ್ತಿ ಥರದವರು ಗೇಲಿ ಮಾಡಿದ್ದಿದೆ. ಈಚೀಚೆಗೆ 'ದೇಸಾಯಿಯವರ ಬರವಣಿಗೆ ಅತಿ ಮೆಲೊಡ್ರಮ್ಯಾಟಿಕ್' ಎಂದು ಮೂಗು ಮುರಿಯುವ ಹೊಸ ಮೇಷ್ಟ್ರುಗಳಿದ್ದಾರಂತೆ. ಮೊನ್ನೆಯಿನ್ನೂ ತನ್ನ 'ಮಹಾಕೋಟೆ' ಕಾದಂಬರಿಯನ್ನು ಕಾಲೇಜು ಪಠ್ಯ ಮಾಡಬೇಕೆಂಬ ಚರ್ಚೆಯಲ್ಲಿ, ಅಧ್ಯಯನ ಮಂಡಳಿಯವರು ಇದು 'ಅತಿಭಾವುಕ' ಕಾದಂಬರಿ ಎಂದು ಪಕ್ಕಕ್ಕಿಟ್ಟರಂತೆ; ಬದಲಿಗೆ ಶ್ರೀಕೃಷ್ಣ ಆಲನಹಳ್ಳಿಯ 'ಕಾಡು' ಕಾದಂಬರಿ ಆರಿಸಿಕೊಂಡರಂತೆ. ಅಂದರೆ, ಈ ಕಾಲದ ಓದುಗರಿಗೆ ಈ ದೇಸಾಯಿ ಔಟ್ ಡೇಟೆಡ್! ಇದ್ದರೂ ಇರಬಹುದು. ಯಾಕೆಂದರೆ ಈಗಲೂ ನನ್ನ ಪುಸ್ತಕ ಕೊಳ್ಳುತ್ತಿರುವವರೆಲ್ಲ ಹಳೆಯ ಓದುಗರೇ ತಾನೇ!...

ದೇಸಾಯರ ಮನಸ್ಸಿನಲ್ಲಿ ನಡೆಯುತ್ತಿರುವ ವ್ಯಾಪಾರದ ಸುಳಿವೇ ಇಲ್ಲದೆ ಹುಲಗಪ್ಪ ಸುಮ್ಮನೆ ಮಳ್ಳನಂತೆ ಹಳೆಯ ಬಂಗಲೆಯ ಚಿತ್ತಾರಗಳನ್ನು ನೋಡುತಿದ್ದ. ಒಂಥರದ ಸೆಡವು ಅವನೊಳಗೆ ತುಂಬಿಕೊಳ್ಳತೊಡಗಿತು. ಇಲ್ಲಿಗೆ ಯಾಕಾದರೂ ಬಂದೆ ಎಂದು ಒಳಗೊಳಗೇ ರೇಗತೊಡಗಿತು. ಅಷ್ಟೊತ್ತಿಗೆ ದೇಸಾಯರು ಪತ್ರಿಕೆಯನ್ನು ಟೀಪಾಯಿಯ ಮೇಲಿಟ್ಟು ಮುಗುಳ್ನಕ್ಕರು. ಹುಲಗಪ್ಪ 'ಸಾರ್?' ಅಂದ. ದೇಸಾಯಿ ಕತ್ತು ಕೊಂಚ ಎಡಕ್ಕೆ ತಿರುಗಿಸಿ, ಹಜಾರದ ಪರದೆಯ ಹಿಂದೆ ಇದ್ದಿರಬಹುದಾದ ವ್ಯಕ್ತಿಯೊಬ್ಬನಿಗೆ 'ಜೀವನ್, ಆ ರಿಸರ್ಚರ್ ಯಾರೂಂತ ಕೇಳ್ತಾ ಇದ್ಯಲ್ಲ, ಇವರೇ' ಅಂದರು. ಹುಲಗಪ್ಪನಿಗೆ ಚಣ ಭಯವಾಯಿತು. ಆಸಾಮಿ ಬಂದು ತದುಕಿದರೆ ಬಿಡಿಸಿಕೊಳ್ಳುವವರೂ